# ಡಿಜಿಟಲ್ ಕೌಶಲ ತರಬೇತಿ ಕೇಂದ್ರ ಸ್ಥಾಪನೆ

# ಪ್ರಜಾವಾಣಿ ವಾರ್ತೆ

4 Apr, 2017

ನಗರದ ಆರ್‌ವಿಸಿಇ ಕ್ಯಾಂಪಸ್‌ನಲ್ಲಿ ಸ್ಥಾಪಿಸಿರುವ ಕೇಂದ್ರವನ್ನು ಐ.ಟಿ, ಬಿ.ಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಗೌರವ್ ಗುಪ್ತಾ ಸೋಮವಾರ ಉದ್ಘಾಟಿಸಿದರು.



ಕೆ.ಎನ್. ಸುಬ್ರಮಣ್ಯ ಮಾತನಾಡಿದರು. ವಿ.ಸಿ. ಗೋಪಾಲರತ್ನಂ ಇದ್ದಾರೆ.

**ಬೆಂಗಳೂರು:** ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಡಿಜಿಟಲ್ ಕೌಶಲ ಹಾಗೂ ತರಬೇತಿ ನೀಡುವ ಉದ್ದೇಶದಿಂದ ಆರ್.ವಿ. ಎಂಜಿನಿಯರಿಂಗ್ ಕಾಲೇಜು (ಆರ್‌ವಿಸಿಇ) ಮತ್ತು ಸಿಸ್ಕೊ ಸಂಸ್ಥೆಯ ಸಹಭಾಗಿತ್ವದಲ್ಲಿ ‘ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಇಂಟರ್ನೆಟ್ ಆಫ್ ಥಿಂಗ್ಸ್’ ಸ್ಥಾಪಿಸಲಾಗಿದೆ.

ನಗರದ ಆರ್‌ವಿಸಿಇ ಕ್ಯಾಂಪಸ್‌ನಲ್ಲಿ ಸ್ಥಾಪಿಸಿರುವ ಕೇಂದ್ರವನ್ನು ಐ.ಟಿ, ಬಿ.ಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಗೌರವ್ ಗುಪ್ತಾ ಸೋಮವಾರ ಉದ್ಘಾಟಿಸಿದರು.

ಕೇಂದ್ರವು ಮುಂದಿನ ಐದು ವರ್ಷಗಳಲ್ಲಿ 50 ಕಾಲೇಜುಗಳ 10,000 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಿದೆ. ಡಿಜಿಟಲ್ ಆರ್ಥಿಕತೆಗೆ ಪೂರಕವಾಗಿ ವಿಶೇಷ ಪಠ್ಯಕ್ರಮ ರೂಪಿಸಲಿದೆ.

ನೇರ ಪ್ರಾತ್ಯಕ್ಷಿಕೆ, ವಿಡಿಯೊ ಆಧಾರಿತ ಕಲಿಕೆ ಮತ್ತು ತಂತ್ರಜ್ಞಾನದ ಅಳವಡಿಕೆಗೆ ಉತ್ತೇಜನ ನೀಡಲಿದೆ. ವಿದ್ಯಾರ್ಥಿಗಳು ಹಾಗೂ ವೃತ್ತಿಪರರ ಅಗತ್ಯಕ್ಕೆ ತಕ್ಕಂತೆ 4 ಹಾಗೂ 6 ತಿಂಗಳ ತಾಂತ್ರಿಕ ಕೋರ್ಸ್‌ಗಳನ್ನು ರೂಪಿಸಲಿದೆ. ಇವು ವಾರಾಂತ್ಯದಲ್ಲಿ ನಡೆಯಲಿವೆ.

ಸಿಸ್ಕೊ ಸಂಸ್ಥೆಯ ವಿ.ಸಿ. ಗೋಪಾಲರತ್ನಂ ಮಾತನಾಡಿ, ‘ಸೆಂಟರ್ ಆಫ್ ಎಕ್ಸಲೆನ್ಸ್ ಮೂಲಕ ವಿದ್ಯಾರ್ಥಿಗಳು ಮತ್ತು ವೃತ್ತಿಪರರ ಕೌಶಲ ವೃದ್ಧಿಗೆ ಒತ್ತು ನೀಡಲಾಗುತ್ತದೆ. ನವೋದ್ಯಮ ಸ್ಥಾಪಿಸುವವರಿಗೆ ಬೇಕಾದ ತಾಂತ್ರಿಕ ನೆರವು ಒದಗಿಸಲಿದೆ’ ಎಂದು ಹೇಳಿದರು.

ಆರ್‌ವಿಸಿಇ ಪ್ರಾಂಶುಪಾಲ ಡಾ. ಕೆ.ಎನ್.ಸುಬ್ರಹ್ಮಣ್ಯ ಮಾತನಾಡಿ, ‘ಸಿಸ್ಕೊ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ವಿಶ್ವದರ್ಜೆಯ ಕೌಶಲ ಮತ್ತು ತರಬೇತಿಯನ್ನು ನೀಡಲಾಗುತ್ತದೆ’ ಎಂದರು.